**M.V.C.No.881/2023** **RW-1**

ವಿಕಾಸ್ ಕೆ.ಕೆ ಬಿನ್ ರಾಮಕೃಷ್ಣ ಕೆ

ದಿನಾಂಕಃ **01/07/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರವಾಗಿ ಶ್ರೀ ಬಿ.ಸಿ.ಆರ್. ವಕೀಲರಿಂದಃ

KA 13 TB 7438 tractor ಗೆ ನಮ್ಮ ವಿಮಾ ಸಂಸ್ಥೆಯಿಂದ ವಿಮೆ ನೀಡಿರುತ್ತೇವೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಆ ಟ್ರ್ಯಾಕ್ಟರ್ ನಿಂದ ಯಾವುದೇ ಅಪಘಾತ ಸಂಭವಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಅಪಘಾತವು ಹೊನ್ನವಳ್ಳಿ ಗ್ರಾಮದ ದೇವರಾಜ್ ಎಂಬುವವರ ಕಣದಲ್ಲಿ ಭತ್ತದ ಹುಲ್ಲನ್ನು ಬೇರ್ಪಡಿಸುವ ಸಂದರ್ಭದಲ್ಲಿ ಅರ್ಜಿದಾರರಿಗೆ ಅಪಘಾತ ಉಂಟಾಗಿತ್ತು ಎಂದರೆ ಸರಿಯಲ್ಲ. ಹುಲ್ಲು ಮತ್ತು ಭತ್ತವನ್ನು ಬೇರ್ಪಡಿಸುವ ಸಲುವಾಗಿ ಟ್ರ್ಯಾಕ್ಟರ್ ಕಣದಲ್ಲಿ ಹುಲ್ಲಿನ ಮೇಲೆ ಸುತ್ತುತ್ತಿತ್ತು ಎಂದರೆ ಗೊತ್ತಿಲ್ಲ. ಆ ರೀತಿ ಹುಲ್ಲಿನ ಮೇಲೆ tractor ಸುತ್ತುವ ಸಂದರ್ಭದಲ್ಲಿ ಅರ್ಜಿದಾರರು ಕಣದ ಹೊರಗೆ ಬಂದ ಹುಲ್ಲನ್ನು ಕಣದ ಒಳಗೆ ಹುಲ್ಲನ್ನು ಕಾಲಿನಿಂದ ತಳ್ಳುತ್ತಿದ್ದ ವೇಳೆಯಲ್ಲಿ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಆ ವೇಳೆಯಲ್ಲಿ tractor ಚಾಲಕ tractor ಅನ್ನು ಅತಿವೇಗ ಅಜಾಗರೂಕತೆ ಚಾಲನೆಯಿಂದ ಟ್ರ್ಯಾಕ್ಟರ್ ನ ದೊಡ್ಡ ಚಕ್ರಗಳು ಅರ್ಜಿದಾರರ ಕಾಲಿಗೆ ತಾಗಿ ಕೆಳಗೆ ಬಂದಾಗ ಆತನ ಕಾಲಿನ ಮೇಲೆ ಚಕ್ರ ಹರಿದು 2 ಕಾಲುಗಳಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು,ಪೋಲಿಸರು ತನಿಖೆ ಮಾಡಿ tractor ತಪ್ಪಿನಿಂದ ಅಪಘಾತ ಸಂಭವಿಸಿಲ್ಲ ಹಾಗೂ ಟ್ರ್ಯಾಕ್ಟರ್ ಅಲ್ಲಿಯೇ ನಿಂತಿತ್ತು ಎಂದು ದೋಷಾರೋಪಣ ಪಟ್ಟಿಯಲ್ಲಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತದ ನಂತರ ದೇವರಾಜ್ ಎಂಬುವವರ ಕಣದಲ್ಲಿಯೇ ಟ್ರ್ಯಾಕ್ಟರ್ ಇತ್ತು ಎಂದರೆ ಸರಿ. ಅಪಘಾತದ ನಂತರ ಚಿಕಿತ್ಸೆಗಾಗಿ ಅರ್ಜಿದಾರರನ್ನು ಅರಕಲಗೂಡಿನ ಸರ್ಕಾರಿ ಆಸ್ಪತ್ರೆ, ಹಾಸನ ಸರ್ಕಾರಿ ಆಸ್ಪತ್ರೆ ಹಾಗೂ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಲಾಗಿತ್ತು ಎಂದರೆ ಗೊತ್ತಿಲ್ಲ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೂಳೆಗೆ ತುಂಬಾ ಪೆಟ್ಟಾದ ಕಾರಣ ಬಲ ಮಂಡಿಯಿಂದ ಕೆಳಗಿನ ಕಾಲನ್ನು ಶಸ್ತ್ರಚಿಕಿತ್ಸೆ ಮಾಡಿ ತೆಗೆದು ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಹಾಗೂ

ಎಡಗಾಲಿಗೆ ರಾಡ್ ಅಳವಡಿಸಿ ಇಂದಿಗೂ ಸಹ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಭತ್ತ ಬಡಿಯುವ ಯಂತ್ರದಿಂದ ಅಪಘಾತ ಸಂಭವಿಸಿಲ್ಲ ಆದರೆ ಟ್ರ್ಯಾಕ್ಟರ್ ನಿಂದ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನೀಡುವ ಪರಿಹಾರವನ್ನು ತಪ್ಪಿಸುವ ಉದ್ದೇಶದಿಂದ ಸುಳ್ಳು ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ನಮ್ಮ ಕಂಪನಿಯ ವತಿಯಿಂದ ಪ್ರತ್ಯೇಕ ಸ್ಥಳ ತನಿಖೆ ನಡೆಸಿ ವರದಿ ಪಡೆದಿಲ್ಲ. ಅಪಘಾತದ ಬಗ್ಗೆ ನನಗೆ ಖಚಿತ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ವಿಮಾ ಸಂಸ್ಥೆಯೇ ಅರ್ಜಿದಾರರಿಗೆ ಪರಿಹಾರ ನೀಡಲು ಭಾದ್ಯಸ್ಥರು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

(ನಾಗೇಶ ಮೂರ್ತಿ ಬಿ.ಕೆ)
ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅರಕಲಗೂಡು